# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019, 12/2022

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಶಶಿಕುಮಾರ | ಫ್ರಾಸಾಃ | 41 |
| **ತಂದೆಯ ಹೆಸರುಃ** | ವೆಂಕಟರಮಣಪ್ಪ | ಚಾಸಾಃ | 58 |
| **ವಯಸ್ಸುಃ** | 36 | ಪ್ರಮಾಣ ವಚನ ಭೋದಿಸಿದ ದಿನಾಂಕ: | 08-09-2025 |
| **ಉದ್ಯೋಗಃ** | ಆಸ್ಪತ್ರೆ ನೌಕರ | | |
| **ವಾಸ ಸ್ಥಳಃ** | ಚಿಂತಾಮಣಿ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಈಗ ವಿಸಿ ಮೂಲಕ ನೋಡುತ್ತಿರುವ *1* ನೇ ಆರೋಪಿಯನ್ನು ನೋಡಿಲ್ಲ. ನ್ಯಾಯಾಲಯದ ಮುಂದಿರುವ *2* ಮತ್ತು *3* ನೇ ಆರೋಪಿ ಹಾಗೂ ಗೈರು ಹಾಜರಿರುವ *4* ನೇ ಆರೋಪಿಯನ್ನು ಸಹ ನೋಡಿಲ್ಲ. ಈಗ ನನಗೆ ತೋರಿಸಿದ ನಿಪಿ-*13* ದಾಖಲೆಯಲ್ಲಿರುವ ಸಹಿ ನನ್ನದು. ಅದನ್ನು ನಿಪಿ-*13(ಡಿ)* ಎಂದು ಗುರುತಿಸಲಾಯಿತು. *5-6* ವರ್ಷಗಳ ಹಿಂದೆ ನಾನು ಕರ್ತವ್ಯ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ ಗಜಾನನ ಸರ್ಕಲ್ ಬಳಿ ಪರಿಚಯವಿದ್ದ ಪೋಲಿಸರು ಸದರಿ ಸಹಿಯನ್ನು ಪಡೆದುಕೊಂಡರು. ಯಾವ ಕಾರಣಕ್ಕೆಂದು ಗೊತ್ತಿಲ್ಲ. ನಾನು ಪೋಲಿಸರೊಂದಿಗೆ ಯಾವತ್ತು ಕಾರಾಗೃಹಕ್ಕೆ ಹೋಗಿಲ್ಲ. *2* ರಿಂದ *4* ನೇ ಆರೋಪಿಗಳನ್ನು ಸಹಸೀಲ್ದಾರರ ಮುಂದೆ ಗುರುತು ಕವಾಯತಿನಲ್ಲಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿ.11.02.2019 ರಂದು ಪೋಲಿಸರು ಕಾರಾಗೃಹದಲ್ಲಿ 2 ರಿಂದ 4 ನೇ ಆರೋಪಿತರು ಗುರುತು ಕವಯತು ಬಗ್ಗೆ ನನ್ನನು ಚಾಸಾ-59 ರವರ ಜೊತೆ ಕರೆದುಕೊಂಡು ಹೋಗಿದ್ದು ಅಲ್ಲಿ ತಹಸೀಲ್ದಾರರ ಸಮಕ್ಷಮ ಗುರುತು ಕವಾಯತಿನಲ್ಲಿ 2 ರಿಂದ 4 ನೇ ಆರೋಪಿತರನ್ನು ಗುರುತಿಸಿ ಪಂಚನಾಮೆಗೆ ಸಹಿ ಮಾಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲ.**

**ಮರು ವಿಚಾರಣೆಃ ….. ಇಲ್ಲ …..**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)  ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ08.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.